**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ನಂಜನಗೂಡು**

**ಸಿಸಿ ಸಂಖ್ಯೆ: 448/2024**

**ಫಿರ್ಯಾದುದಾರರು** : ಸರ್ಕಾರದ ಪರವಾಗಿ ಆರಕ್ಷಕ ಉಪ-ನಿರೀಕ್ಷಕರು,
ಹುಲ್ಲಹಳ್ಳಿ ಪೊಲೀಸ್ ಠಾಣೆ, ನಂಜನಗೂಡು.

ವಿರುದ್ಧ

**ಆರೋಪಿಗಳು** : ಶ್ರೀ ಶಂಭುಲಿಂಗಪ್ಪ

:: **ಆಪಾದನೆ** ::

**ಶ್ರೀ ಸತೀಶ. ಕೆ.ಜಿ. ಬಿ.ಎ., ಎಲ್.ಎಲ್.ಬಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿಯಾದಃ-

ಶ್ರೀ ಶಂಭುಲಿಂಗಪ್ಪ ಬಿನ್ ಲೇಟ್ ಶಂಭಪ್ಪ
ವಯಸ್ಸು ಸುಮಾರು 62 ವರ್ಷ,

ನಂಜನಗೂಡು ತಾಲ್ಲೂಕಿನ ಹೆಡಿಯಾಲ ಗ್ರಾಮದ ನಿವಾಸಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ದಿನಾಂಕ 24.09.2023 ರಂದು ಬೆಳಿಗ್ಗೆ 09.30 ಗಂಟೆಯಲ್ಲಿ ಹುಲ್ಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹೆಡಿಯಾಲ ಗ್ರಾಮದಲ್ಲಿರುವ ನೇಮತ್ ಆಲಿರವರ ಕಬ್ಬಿಣದ ಅಂಗಡಿ ಮುಂಭಾಗದ ರಸ್ತೆಯಲ್ಲಿ ಚಾಸಾ-1-ಶ್ರೀಮತಿ.ಮಾಲತಿ ಮತ್ತು ಚಾಸಾ-2-ಶ್ರೀ.ವೀರಭದ್ರಸ್ವಾಮಿರವರು ನೇಮತ್ತಾಲಿರವರ ಕಬ್ಬಿಣದ ಅಂಗಡಿಗೆ ಸಾಮಾನು ತರಲು ಬಂದಿದ್ದಾಗ, 1 ನೇ ಆರೋಪಿಯಾದ ನೀವು ಚಾಸಾ-2 ರವರನ್ನು ಉದ್ದೇಶಿಸಿ "ಏನೂ ನೀನು ನನ್ನ ಮೇಲೆ ಮರಕಡಿದಿದ್ದಾನೆಂದು ಕಂಪ್ಲೇಂಟ್ ಕೊಡುತ್ತೀನಿ ಅಂತ ಹೇಳುತ್ತಿದ್ದಂತೆ ಸೂಳೆಮಕ್ಕಳ ಬೋಳಿಮಗನೆ ನನ್ನ ಮೇಲೆ ಕಂಪ್ಲೆಂಟ್ ಕೊಡುತ್ತಿಯಾ ನನ್ನ ಮಗನೆ" ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದು, ಆ ಮೂಲಕ ಚಾಸಾ-2 ರವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಅವರು ಕುಪಿತರಾಗಿ ಶಾಂತಿಭಂಗವನ್ನುಂಟು ಮಾಡಲೆಂಬ ಅಥವಾ ಯಾವುದೇ ಅಪರಾಧವನ್ನು ಮಾಡಬೇಕೆಂಬ ಉದ್ದೇಶದಿಂದ ಅವರನ್ನು

ಅವಮಾನಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಚಾಸಾ-2 ರವರ ಜೊತೆ ಜಗಳ ತೆಗೆದು, ತೀವ್ರ ಉದ್ರೇಕದಿಂದಲ್ಲದೆ ಇರುವ ಚಾಸಾ-2 ರವರಿಗೆ ಅವಮಾನ ಮಾಡುವ ಸಲುವಾಗಿ ತಮ್ಮ ಕಾಲಿನಲ್ಲಿ ಮೆಟ್ಟಿದ್ದ ಚಪ್ಪಲಿ ತೆಗೆದುಕೊಂಡು ಚಾಸಾ-2 ರವರ ಮೈ ಮೇಲೆ, ಎದೆಗೆ ಮತ್ತು ಕುತ್ತಿಗೆಗೆ ಹೊಡೆದು ಅಪರಾಧಿಕ ಬಲಪ್ರಯೋಗ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 355 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಚಾಸಾ-2 ರವರ ಜೊತೆ ಜಗಳ ತೆಗೆದು, ಆರೋಪಿಯಾದ ನೀವು ಜಗಳ ಬಿಡಿಸಲು ಬಂದ ಚಾಸಾ-1 ರವರ ಎಡಗೈ ಹಿಡಿದು ನುಲಿಚಿ ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಚಾಸಾ-2 ರವರ ಜೊತೆ ಜಗಳ ತೆಗೆದು, ಚಾಸಾ-1 ಮತ್ತು 2 ರವರನ್ನು ಉದ್ದೇಶಿಸಿ "ನೀವು ಕಂಪ್ಲೆಂಟ್ ಕೊಟ್ಟರೆ ನಿಮ್ಮನು ಸುಮ್ಮನೆ ಬಿಡುವುದಿಲ್ಲ" ಜೀವಬೆದರಿಕೆ ಹಾಕಿದ್ದು, ಆ ಮೂಲಕ ಚಾಸಾ-1 ಮತ್ತು 2 ರವರು ಹೆದರುವಂತೆ ಮಾಡಿ ಅವರು ಕಾನೂನು ಸಮ್ಮತವಾಗಿ ಮಾಡಬೇಕಾಗಿರುವ ಕೃತ್ಯವನ್ನು ಮಾಡದಂತೆ ಅಥವಾ ಕಾನೂನು ಸಮ್ಮತವಾಗಿ ಮಾಡಬಾರದ ಕೃತ್ಯವನ್ನು ಮಾಡುವಂತೆ ಅಪಾಯದ ಭೀತಿಯನ್ನು ಹುಟ್ಟಿಸಿ ಅಪರಾಧಿಕ ಭಯೋತ್ಪಾದನೆಯನ್ನು ಉಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಪ್ರಶ್ನೆ:1- ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?

ಆರೋಪಿ ಉತ್ತರಃ

ಪ್ರಶ್ನೆ:2– ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?

ಆರೋಪಿ ಉತ್ತರಃ

(ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ಆಪಾದನೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿ ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತ್ತೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 07.07.2025.

(ಸತೀಶ. ಕೆ.ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ನಂಜನಗೂಡು.